# ಕಾನನದ ತುದಿಗೆ ತವರಿನ ಬೆಳಕು

‘ನೀನು ಬೇಸಾಯದ ಕಡೆ ಗಮನಕೊಡು’ ಎಂದು ಹೇಳಿದ ಅತ್ತೆ, ‘ಎಲ್ಲವನ್ನು ನೋಡಿ ನಡೆಸಿದರೆ ಸುಖವಾಗಿ ಬದುಕಬಹುದು. ಸತಿಗೆ ಕೊಡೋದನ್ನು ಸತಿಗೂ ಕೊಡಬಹುದು. ಈ ಮನೇನ ಸ್ವಲ್ಪ ರಿಪೇರಿ ಮಾಡಿದರೆ ಇದೇ ಸಾಕು. ಮತ್ತೆ ನಿಮ್ಮಿಬ್ಬರ ಮದುವೆ. ದೇವಸ್ಥಾನದಲ್ಲಿ ಸರಳವಾಗಿ ಮುಗಿಸಬಹುದು. ಹೆಚ್ಚಿಗೆ ಯಾರನ್ನು ಕರೆಯೋದು ಬೇಡ. ನಾವು ನಾವೇ ಸಾಕು. ಒಡವೆಗಳನ್ನೆಲ್ಲಾ ಮಾವ ಮೊದಲೇ ರೆಡಿ ಮಾಡಿ ಇಟ್ಟಿದ್ದಾರೆ. ಬಟ್ಟೆ ಕೊಂಡು ಕೊಂಡ್ರಾಯ್ತು’ ಎಂದರು.

ನನ್ನ ಬದುಕು ಮತ್ತೆ ರಂಗೇರುತ್ತಿದೆ. ಎಲ್ಲಾ ರಂಗದಲ್ಲೂ ನಾನೊಬ್ಬ ಪರಾಜಿತನೆಂದುಕೊಂಡಿದ್ದೆ. ಈಗ ಅವೆಲ್ಲಾ ಬದಲಾಗುತ್ತಿದೆ.

ಶ್ರೀದೇವಿ ಒಂದು ಸಮಾನಾಂತರ ರೇಖೆಯಾಗಿ ನೆಲೆಯೂರಿದ್ದಾಳೆ. ಯಾವತ್ತಾದರೂ ಸಿಕ್ಕಿಬಿದ್ದರೆ ಸುಮಿತ್ರಾ ನೆರವಾಗಬಹುದೆಂಬ ನಂಬಿಕೆಯಿಲ್ಲ. ಎಂದಾದರೂ ಒಂದು ದಿನ ಆ ಕಥೆಗೂ ಬಣ್ಣ ಹಚ್ಚಿ ಮೆದುವಾಗಿ ಹೇಳಲೇಬೇಕು.

ಬಹುಶಃ ಶ್ರೀದೇವಿಯ ಪೂರ್ಣತೆಯಾಗಿರಬೇಕು ಸುಮಿತ್ರಾ. ಸುಮಿತ್ರಾಳೊಂದಿಗಿನ ಬದುಕು ಜೊತೆಗಿದ್ದರಷ್ಟೇ ಜನ್ಮ ಸಾರ್ಥಕವೆನಿಸುವುದು. ಎಲ್ಲಾ ಅಲೆದಾಟಗಳಿಗೆ ಇತಿಶ್ರೀ ಹಾಡಿ ನೆಮ್ಮದಿಯ ಬದುಕು. ಹಳೆಯ ಪ್ರವಾಚಕ ಬಾಲಿಶವೂ ಹೇಳಿದಂತೆ ಇನ್ನು ಮೂರು ಹೊತ್ತು ಆಹಾರ ಸೇವಿಸಿದ ನಂತರ ಶ್ರೀದೇವಿಯ ನೆನಪುಗಳನ್ನು ಮೆಲುಕುಹಾಕಬಹುದು.

ಹೊರಗೆ ಹೋಗಲು ನಾನು ಹಿಂಜರಿದೆ. ಹಳೆಯ

